ನೀಲು
ಮತ್ತು ಪೀಲು



ಪರಿಕಲ್ಪನೆ ಹಾಗೂ ಚಿತ್ರ :
ವಿಕಿ ಆರ್ಯ
ಅನುವಾದ :
ಭಾರತಿ ಮೋಹನ ಕೋಟಿ

ಗೋವಾದಲ್ಲಿ 2012ರ ಜೂನ್ 26ರಿಂದ 29ರವರೆಗೆ ಆಯೋಜಿಸಿದ್ದ ಲೇಖಕ ಚಿತ್ರಕಾರರ ಕಮ್ಮಟದಲ್ಲಿ ಈ ಪುಸ್ತಕವನ್ನು ಅಭಿವೃದ್ಧಿಪಡಿಸಲಾಗಿದೆ.

ISBN 978-81-237-7915-7

ಮೊದಲ ಮುದ್ರಣ 2016
ಮೊದಲ ಮರುಮುದ್ರಣ 2023 (ಶಕ 1944)

Neelu and Peelu (*English*)

Neelu mattu Peelu (*Kannada*)

₹ 55.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5 ಇನ್‌ಸ್ಟಿಟ್ಯೂರನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ

Website : www.nbtindia.gov.in

ನೆಹರೂ ಬಾಲಪುಸ್ತಕಾಲಯ

ನೀಲು ಮತ್ತು ಪೀಲು



ಪರಿಕಲ್ಪನೆ ಹಾಗೂ ಚಿತ್ರ :

ವಿಕಿ ಆರ್ಯ

ಅನುವಾದ :

ಭಾರತಿ ಮೋಹನ ಕೋಟಿ

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ



ಮಳೆಯ ನಂತರದ ಒಂದು ದಿನ. ಎರಡು ಬಳ್ಳಿ ಬೀಜಗಳು ಮಣ್ಣಿನೊಳಗಿಂದ ಒಟ್ಟಿಗೇ ಮೊಳಕೆಯೊಡೆದವು. ಆ ಎರಡೂ ಸಸಿಗಳು ಬೇಗ ಬೇಗನೆ ಬೆಳೆದವು.



ಒಂದು ಬಳ್ಳಿಯಲ್ಲಿ ಹಳದಿ, ಮತ್ತೊಂದರಲ್ಲಿ ನೀಲಿ ಮೊಗ್ಗುಗಳು ಮೂಡಿದವು.



ಮಕ್ಕಳು ಪ್ರೀತಿಯಿಂದ ಅವಕ್ಕೆ ನೀಲು (ನೀಲಿ) ಮತ್ತು ಪೀಲು (ಹಳದಿ) ಎಂದು ಹೆಸರಿಟ್ಟರು. ಅದು ಹೇಗೊ, ನೀಲು ಪೀಲುವಿಗಿಂತಲೂ ವೇಗವಾಗಿ ಬೆಳೆಯತೊಡಗಿತು.



ನೀಲುವಿಗೆ ತನ್ನ ಬೆಳವಣಿಗೆಯಿಂದ ಅತಿಯಾದ ಆತ್ಮವಿಶ್ವಾಸ, ಜಂಬದ ಭಾವನೆ ಬಂದು ಬಿಟ್ಟಿತು. ಕೆಲವೊಮ್ಮೆ ಪೀಲುವಿಗೆ ಇದರಿಂದ ತುಂಬಾ ಬೇಸರವೆನಿಸುತ್ತಿತ್ತು.



ಪೀಲುವಿಗೂ ಎತ್ತರಕ್ಕೆ ಬೆಳೆಯುವ ಆಸೆಯಿತ್ತು. ಆದರೆ ನೀಲು ಅದರ ದಾರಿಗೆ ಅಡ್ಡವಾಗಿತ್ತು.



ಪೀಲು ಬೆಳೆಯಲು ಪ್ರಯತ್ನಿಸಿದಾಗಲೆಲ್ಲ ನೀಲು ಅದನ್ನು ತಡೆದು ನಿಲ್ಲಿಸುತ್ತಿತ್ತು.



ತನ್ನ ವಿಸ್ತಾರ ಬೆಳವಣಿಗೆಯನ್ನು ಕಂಡು ನೀಲುವಿಗೆ ಖುಷಿಯೋ ಖುಷಿ.
ಆದರೆ ಪೀಲುವಿಗೆ ತಾನು ಕೈದಿಯಂತೆ ಎಂಬ ಭಾವನೆ ಉಂಟಾಯಿತು.





ಒಂದು ದಿನ ಒಂದು ಕರು ಬಂತು. ನೀಲುವಿನ ಮೃದುವಾದ ಹಸಿರು ಎಲೆಗಳಿಂದ ಆಕರ್ಷಿತವಾದ ಕರು ಅದರ ಕವಲುಗಳನ್ನು ಎಳೆದು ತಿನ್ನತೊಡಗಿತು. ನೀಲುವಿಗೆ ಏನೂ ಮಾಡಲಾಗಲಿಲ್ಲ. ಅದು ಅಸಹಾಯಕತೆಯಿಂದ ಅಳತೊಡಗಿತು.





ಕೊನೆಗೆ ನೀಲು ನೆಲಕ್ಕೆ ಬಿತ್ತು. ಆಗ ಪೀಲುವಿಗೆ ಆಕಾಶದ ಎತ್ತರಕ್ಕೆ ಬೆಳೆಯುವ ಅವಕಾಶ ಒದಗಿ ಬಂತು. ಪೀಲು ವೇಗವಾಗಿ ಬೆಳೆಯತೊಡಗಿತು. ಆದರೆ ಅದು ತನ್ನ ಸ್ನೇಹಿತ ನೀಲುವನ್ನು ಮರೆಯಲಿಲ್ಲ. ಪೀಲು ನೀಲುವಿಗೆ ಸಹಾಯಹಸ್ತ ಚಾಚಿತು.





ನೀಲು ಅಪರಾಧೀ ಭಾವದಿಂದ ನಾಚಿಕೊಂಡಿತು. ಅಲ್ಲದೆ ಪೀಲುವೇ ತನ್ನ ನಿಜವಾದ ಸ್ನೇಹಿತ ಎಂಬುದನ್ನು ಮನಗಂಡಿತು.

ಪೀಲು ನೀಲುವಿಗೆ ಸಹಾಯಹಸ್ತ ನೀಡಿ ನೆರವಾಯಿತು . . .





. . . ನಂತರದಲ್ಲಿ ಅವೆರಡೂ ಸದಾ ಸ್ನೇಹಿತರಾಗಿದ್ದವು.

Printed at : Magic International Pvt. Ltd., Greater Noida



nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 55.00
ISBN 812377915-1
9 788123 779157
22232981
Neelu & Peelu *(Kannada)*